ಕಾರ್ಟೂನ್ ಪಾರ್ಕ್, ಕ್ರೋಕೊಡೈಲ್ ಪಾರ್ಕ್, ಮಾಲಂಗಿ ಇಕೋ ಪಾರ್ಕ್, ಹ್ಯಾಂಗಿಂಗ್ ಬ್ರಿಜ್, ಕ್ಯಾಸಲ್‌ರಾಕ್, ದೂದ್ ಸಾಗರ್, ವಜ್ರ ಫಾಲ್ಸ್, ಸುಪಾ ಡ್ಯಾಂ, ಕಾಳಿ ಬ್ಯಾಕ್ ವಾಟರ್ – ಪಟ್ಟಿ ಹೀಗೆ ಬೆಳೆಯುತ್ತದೆ.

## ವನ್ಯಜೀವಿ ಧಾಮ ಸಫಾರಿ

ಹೆಸರೇ ಹೇಳಿವಂತೆ ವನ್ಯಜೀವಿಗಳನ್ನು ನೋಡುವುದಿದ್ದರೆ ಇಲ್ಲಿಗೆ ಬರಬೇಕು. ಹುಲಿ, ಆನೆ, ಚಿರತೆ, ಮೊಸಳೆ ಅಷ್ಟೇ ಅಲ್ಲದೇ ಅಪರೂಪದ ಹಕ್ಕಿಗಳನ್ನೂ ಇಲ್ಲಿ ವೀಕ್ಷಿಸಬಹುದು. ಬೆಳಿಗ್ಗೆ ಆರು ಗಂಟೆಯಿಂದ ಸಂಜೆ ಆರು ಗಂಟೆಯವರೆಗೆ ಇಲ್ಲಿ ಬಂದು ವಿಹರಿಸಬಹುದು.

ಶುಲ್ಕ: ₹ 40 , ₹ 80

ದೂರ: ದಾಂಡೇಲಿ ಬಸ್ ನಿಲ್ದಾಣದಿಂದ 14 ಕಿ.ಮೀ.

## ರ್‍ಯಾಫ್ಟಿಂಗ್

ವಿಶಾಲವಾಗಿ ಹಬ್ಬಿ ಹರಿಯುತ್ತಿರುವ ಕಾಳಿ ನದಿಯಲ್ಲಿ ರ್‍ಯಾಫ್ಟಿಂಗ್ ಮಾಡಲು ಅವಕಾಶವಿದೆ. ದಾಂಡೇಲಿ ಹಾಗೂ ಜೋಯಿಡಾ ತಾಲೂಕಿನ ಗಣೇಶಗುಡಿಯಲ್ಲಿ ರ್‍ಯಾಫ್ಟಿಂಗ್ ಮಾಡಬಹುದು. ತಜ್ಞರು ಜತೆಗಿರುತ್ತಾರೆ. ಲೈಫ್ ಜಾಕೆಟ್ ಇರುತ್ತದೆ. ಗಣೇಶಗುಡಿ ಸಮೀಪ ಇರುವ ಹಾರ್ನ್‌ಬಿಲ್ ರೆಸಾರ್ಟ್ ಈ ಎಲ್ಲ ಸೌಲಭ್ಯಗಳನ್ನು ಒದಗಿಸುತ್ತದೆ. ಯಾವುದೇ ಹಾನಿ ಆಗದಂತೆ ಕಡು ಬೇಸಿಗೆಯ ಸುಡುಬಿಸಿಲಿನಲ್ಲಿ ನೀರಾಟದ ಸಖ್ಯದ ಮೋಜು ಅನುಭವಿಸಬಹುದು.

## ಕಾವಳಾ ಗುಹೆ

‘ಕಾವಳಾ’, ‘ಸಿದ್ಧ’ ಸೇರಿದಂತೆ ಬೇರೆ ಬೇರೆ ಹೆಸರುಗಳಿಂದ ಕರೆಯುವ ಸುಂದರ ಗುಹೆ ‘ಕಾವಳಾ ಗುಹೆ’. ಒಳಗೆ ರುದ್ರಾಕ್ಷಿಯ ಹೊರಮೈಯನ್ನು ಹೋಲುವ ಶಿವಲಿಂಗವಿದೆ. ಶಿವರಾತ್ರಿಯ ದಿನ ವಿಶೇಷ ಜಾತ್ರೆ ನಡೆಯುತ್ತದೆ. ಅರಣ್ಯ ಇಲಾಖೆಯವರ ಪರವಾನಗಿ ಇದ್ದರೆ ಉಳಿದ ದಿನಗಳಲ್ಲಿಯೂ ಇಲ್ಲಿಗೆ ಹೋಗಿ ಬರಬಹುದು. ಅಕ್ಟೋಬರ್‌ನಿಂದ ಮಾರ್ಚ್‌ವರೆಗೆ ಇಲ್ಲಿಗೆ ಹೋಗಲು ಪ್ರಶಸ್ತ ಸಮಯ. ಗುಹೆಯ ಮುಂದೆ ನಿಂತರೆ ಕಾಣುವ ಕಾಳಿ ನದಿ, ನಾಗಝರಿ ಪವರ್ ಹೌಸ್ ಈ ಸ್ಥಳದ ಬೋನಸ್!

ದೂರ: ದಾಂಡೇಲಿ ಬಸ್ ನಿಲ್ದಾಣದಿಂದ 26 ಕಿ.ಮೀ.

## ಮೌಲಂಗಿ ಪಾರ್ಕ್

ಸುತ್ತ ಹಬ್ಬಿದ ಹಸಿರು ಮೌಲಂಗಿ ಪಾರ್ಕ್‌ನ ವಿಶೇಷ. ಬಿದಿರುಮೆಳೆಗಳೇ ತುಂಬಿರುವ ಮೌಲಂಗಿ ಬಹಳ ಹಿತವಾದ ಪಿಕ್‌ನಿಕ್ ಸ್ಪಾಟ್. ಕಡಿದಾದ ಇಳಿಜಾರಲ್ಲಿ ಇಳಿಯುವುದು, ಬಂಡೆಗಳನ್ನು ಹತ್ತಿಳಿಯುವ ಸಾಹಸದ ಆಟಗಳನ್ನು ಇಲ್ಲಿ ಆಡಬಹುದು. ಅಪರೂಪದ ಸಸ್ಯಸಂಕುಲಗಳೂ ಇಲ್ಲಿವೆ. ಬೆಳಿಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆವರೆಗೆ ಪಾರ್ಕ್ ತೆರೆದಿರುತ್ತದೆ.

ದೂರ: ದಾಂಡೇಲಿಯಿಂದ 7 ಕಿ.ಮೀ.

## ಹಕ್ಕಿ ಹುಡುಗಿ ರಜನಿ!




ಹಕ್ಕಿಗಳೆಂದರೆ ಯಾರಿಗೆ ತಾನೇ ಪ್ರೀತಿಯಿಲ್ಲ! ಅದರಲ್ಲೂ ದಾಂಡೇಲಿ, ಜೋಯಿಡಾ ವ್ಯಾಪ್ತಿಯಲ್ಲಿ ಅಪರೂಪದ ಪಕ್ಷಿಸಂಕುಲಗಳಿವೆ. ಫ್ಲೈಯಿಂಗ್ ಟೈಗರ್ ಎಂದೇ ಕರೆಸಿಕೊಳ್ಳುವ ಮಲಬಾರ್ ಗ್ರೇಟ್ ಹಾರ್ನ್‌ಬಿಲ್‌ಗಳು ಇಲ್ಲಿನ ಪ್ರಮುಖ ಆಕರ್ಷಣೆ. ಪ್ರತೀವರ್ಷ ಸರ್ಕಾರವೇ ಇಲ್ಲಿ ಹಾರ್ನ್‌ಬಿಲ್ ಹಬ್ಬವನ್ನು ಆಚರಿಸುತ್ತದೆ. ಇದೆಲ್ಲದರ ಜೊತೆಗೆ ನಿತ್ಯವೂ ಪ್ರವಾಸಿಗರಿಗೆ ಪಕ್ಷಿಗಳನ್ನು ತೋರಿಸುತ್ತಾ ಅವುಗಳ ಜೀವನಕ್ರಮ, ಆಹಾರ ಕೂಗು, ಹಾರಾಟಗಳ ಬಗ್ಗೆ ಅಥೆಂಟಿಕ್ ಮಾಹಿತಿಯನ್ನು ನೀಡುತ್ತಿರುವವರು ರಜನಿರಾವ್. ವೃತ್ತಿಯಲ್ಲಿ ಶಿಕ್ಷಕಿ. ಈಗ ಪ್ರವಾಸಿಗರ ಪಾಲಿಗೆ ‘ಹಕ್ಕಿ ಹುಡುಗಿ’! ಇತ್ತೀಚೆಗೆ ಬರ್ಡ್‌ವಾಚಿಂಗ್ ಇವೆಂಟ್ ಕೂಡ ಶುರು ಮಾಡಿದ್ದಾರೆ. ಅಪರೂಪದ ಪಕ್ಷಿಗಳನ್ನು ಪರಿಚಯಿಸುತ್ತಾ, ಅವರ ಲೋಕಕ್ಕೆ ಕರೆದೊಯ್ಯುವ ರಜನಿಯವರನ್ನು ಮಾತಾಡಿಸುವುದಿದ್ದರೆ, 9481723612 ನಂಬರ್‌ಗೆ ಕರೆ ಮಾಡಬಹುದು.

## ಸ್ನೈಕ್ ವ್ಯೂ ಪಾಯಿಂಟ್

ಮಲೆನಾಡಿನ ಸಮೃದ್ಧ ಕಾಡನ್ನು ನೋಡಬೇಕು ಅಂದರೆ ಸೈಕ್ ಪಾಯಿಂಟ್‌ಗೆ ಬರಬೇಕು. ಕಣ್ಣು ಹಾಯಿಸಿದಷ್ಟೂ ದೂರ ಕಾಣುವ ಕಾಡು, ಪರ್ವತ ಶ್ರೇಣಿಗಳ ಜೊತೆಗೆ ಕಾಳೀ ಕಣಿವೆಯ ಸಂಜೆ ಮನಮೋಹಕವಾಗಿರುತ್ತದೆ.

ವರ್ಣಮಯ ಸೂರ್ಯಾಸ್ತ ಇಲ್ಲಿನ ಹೈಲೈಟ್. ಚಾರಣಕ್ಕೂ ಆಸ್ಪದವಿದೆ. ಬೆಳಿಗ್ಗೆ 5ರಿಂದ ಸಂಜೆ 7 ಗಂಟೆವರೆಗೂ ಇಲ್ಲಿಗೆ ಬರಬಹುದು. ಅಂಬಿಕಾನಗರದಿಂದ ಬೊಮ್ಮನಳ್ಳಿಗೆ ಹೋಗುವ ಮಾರ್ಗದಲ್ಲಿ ಇದು ಸಿಗುತ್ತದೆ. ವೀಕ್ಷಣಾಗೋಪುರವೂ ಇದೆ.

## ಸುಪಾ ಡ್ಯಾಂ

ಜೋಯಿಡಾಕ್ಕೆ ಬಂದರೆ ಗಣೇಶಗುಡಿ ಬಳಿ ಇರುವ ಸುಪಾ ಡ್ಯಾಂ ನೋಡದೇ ವಾಪಸ್ ಹೋಗುವಂತಿಲ್ಲ. ಕಾಳಿ ನದಿಗೆ ಅಡ್ಡಲಾಗಿ ಕಟ್ಟಿರುವ ಈ ಜಲಾಶಯ ಇಡೀ ಸುಪಾವನ್ನು ಮುಳುಗಿಸಿದ್ದರೂ, ಗಣೇಶಗುಡಿ ಎಂಬ ಸುಂದರ

ಕಳೆದು ಹೋಗುವ ಖುಷಿ... ಸಿಂಥೇರಿ ರಾಕ್ಸ್‌ನಲ್ಲಿ ಪ್ರವಾಸಿಗರ ವಿಹಾರ

